ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 30-01-1980.

# *ಸ್ನೇಹ, ಸಹಯೋಗ ಮತ್ತು ಶಕ್ತಿಸ್ವರೂಪದ ಪರೀಕ್ಷಾ ಪತ್ರಿಕೆಯ ಪರಿಶೀಲನೆ ಮತ್ತು ಫಲಿತಾಂಶ.*

## (स्नेह, सहयोग और शक्ति स्वरूप के पेपर्स की चेकिंग और रिजल्ट)

ಇಂದು ಬಾಪ್‌ದಾದಾರವರು ನಾಲ್ಕೂ ಕಡೆಯಲ್ಲಿರುವ ಶ್ರೇಷ್ಠಾತ್ಮರನ್ನು ನೋಡುತ್ತಿದ್ದಾರೆ. ನಾಲ್ಕೂ ಕಡೆಯಲ್ಲಿರುವ ಮಕ್ಕಳಲ್ಲಿ ಒಂದೇ ಸ್ನೇಹ ಮತ್ತು ನೆನಪಿನ ಸಂಕಲ್ಪವಿದೆ. ಒಳ್ಳೊಳ್ಳೆಯ ಸರ್ವೀಸೇಬಲ್ ಸಹಜಯೋಗಿ ಮಕ್ಕಳು ಸದಾ ಬಾಪ್‌ದಾದಾರವರ ಜೊತೆಯಿದ್ದಾರೆ. ದೂರವಿರುತ್ತಿದ್ದರೂ ಸ್ನೇಹದ ಆಧಾರದ ಮೇಲೆ ಅತಿಸಮೀಪದಲ್ಲಿದ್ದಾರೆ. ಇಂದು ಬಾಪ್‌ದಾದಾರವರು ಪ್ರತಿಯೊಂದು ಮಕ್ಕಳ ಸ್ನೇಹ, ಸಹಯೋಗ ಮತ್ತು ಶಕ್ತಿಶ್ವರೂಪದ ಶ್ರೇಷ್ಠಮೂರ್ತಿಯನ್ನು ನೋಡುತ್ತಿದ್ದರು. ಆದಿಯಿಂದ ಈಗಿನವರೆಗೂ ಮೂರೂ ವಿಶೇಷತೆಯಲ್ಲಿ ವಿಶೇಷವಾಗಿ ಎಷ್ಟು ಅಂಕಗಳಿವೆ? ಸ್ನೇಹದಲ್ಲಿ ಮೂರು ಮಾತನ್ನು ವಿಶೇಷವಾಗಿ ನೋಡಲಾಯಿತು-

1. ಅಖಂಡ ಸ್ನೇಹ- ಪರಿಸ್ಥಿತಿ ಅಥವಾ ವ್ಯಕ್ತಿಯು ತಂದೆಯೊಂದಿಗಿನ ಸ್ನೇಹದ ಎಳೆಯನ್ನು ತುಂಡರಿಸಲು ಪ್ರಯತ್ನವನ್ನೇಷ್ಟಾದರೂ ಮಾಡಲಿ ಆದರೆ ಪರಿಸ್ಥಿತಿಗಳು ಮತ್ತು ವ್ಯಕ್ತಿಗಳ ಎತ್ತರವಾದ ಗೋಡೆಗಳನ್ನೂ ಪಾರು ಮಾಡುತ್ತಾ, ಸದಾ ಸ್ನೇಹದ ಸಂಬಂಧವನ್ನು ಅಖಂಡವಾಗಿ ಇಟ್ಟುಕೊಂಡಿದ್ದಾರೆ. ಕಾರಣ ಅಥವಾ ಬಲಹೀನತೆಗಳ ಗಂಟನ್ನು ಮತ್ತೆ-ಮತ್ತೆ ಬಂಧಿಸಿಕೊಂಡಿಲ್ಲ. ಇಂತಹ ಅಖಂಡ ಸ್ನೇಹವಿದೆ.

• ಪ್ರತ್ಯಕ್ಷದಲ್ಲಿ ಸದಾ ಸರ್ವ ಸಂಬಂಧದಿಂದ ಪ್ರೀತಿಯ ರೀತಿಯನ್ನು ನಿಭಾಯಿಸಿದ್ದೀರಾ. ಅದರಲ್ಲಿ ಒಂದು ಸಂಬಂಧದ ಪ್ರೀತಿಯನ್ನೂ ನಿಭಾಯಿಸುವುದರಲ್ಲಿ ಕೊರತೆಯಿರಬಾರದು.

• ಸ್ನೇಹದ ಪ್ರತ್ಯಕ್ಷ ರಿಟರ್ನ್‌ನಲ್ಲಿ ತನ್ನ ಸ್ನೇಹಿಮೂರ್ತಿಯ ಮೂಲಕ ಎಷ್ಟು ಜನರನ್ನು ತಂದೆಯ ಸ್ನೇಹಿಯನ್ನಾಗಿ ಮಾಡಿದ್ದೀರಿ. ಕೇವಲ ಜ್ಞಾನದ ಸ್ನೇಹಿಯಲ್ಲ ಅಥವಾ ಪವಿತ್ರತೆಯ ಸ್ನೇಹಿ ಅಥವಾ ಮಕ್ಕಳ ಜೀವನದ ಪರಿವರ್ತನೆಯ ಸ್ನೇಹಿಯಲ್ಲ ಅಥವಾ ಶ್ರೇಷ್ಠ ಆತ್ಮರ ಸ್ನೇಹಿಯೂ ಅಲ್ಲ ಆದರೆ 'ಡೈರೆಕ್ಟ್ ತಂದೆಯ ಸ್ನೇಹಿ', ತಾವು ಒಳ್ಳೆಯವರಾಗಿದ್ದೀರಿ, ಜ್ಞಾನವು ಚೆನ್ನಾಗಿದೆ, ಜೀವನವು ಚೆನ್ನಾಗಿದೆ- ಇಲ್ಲಿಯವರೆಗೆ ಅಲ್ಲ ಆದರೆ ತಂದೆಯು ಬಹಳ ಒಳ್ಳೆಯವರಾಗಿದ್ದಾರೆ. ಇದಕ್ಕೆ ತಂದೆಯ ಸ್ನೇಹಿಯಾಗುವುದು ಎಂದು ಹೇಳಲಾಗುತ್ತದೆ. ಅಂದಮೇಲೆ ಸ್ನೇಹದಲ್ಲಿ ಈ ಮೂರು ಮಾತುಗಳ ವಿಶೇಷತೆಯನ್ನು ನೋಡಿದೆವು.

2. ಸಹಯೋಗದಲ್ಲಿ- ಮುಖ್ಯವಾದ ಮಾತು

• ನಿಷ್ಕಾಮ ಸಹಯೋಗಿ ಆಗಿದ್ದೀರಾ.

• ಸಹಯೋಗದಲ್ಲಿ ಮನಸಾ-ವಾಚಾ-ಕರ್ಮಣಾ, ಸಂಬಂಧ-ಸಂಪರ್ಕದಲ್ಲಿ ಇವೆಲ್ಲಾ ರೂಪದ ಸಹಯೋಗಿಯಾಗಿ ಸದಾ ಇದ್ದೀರಾ.

• ಇಂತಹ ಯೋಗ್ಯ ಸತ್ಯಸಹಯೋಗಿಯನ್ನಾಗಿ ಎಷ್ಟು ಜನರನ್ನು ತಯಾರು ಮಾಡಿದ್ದೀರಿ.

3. ಶಕ್ತಿಸ್ವರೂಪ-

• ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಾ ಅಥವಾ ಶಕ್ತಿವಂತರಾಗಿದ್ದೀರಾ?

• ಸಮಯಕ್ಕೆ ಶಕ್ತಿಗಳ, ಶಸ್ತ್ರಗಳ ಲಾಭವನ್ನು ಪಡೆದಿದ್ದೀರಾ ಅಥವಾ ಶಸ್ತ್ರಗಳು ಲಾಕರ್‌ನಲ್ಲಿಯೇ ಇವೆಯೇ.

• ಸ್ವಯಂನ ಶಕ್ತಿಗಳ ಪ್ರಾಪ್ತಿಯ ಮೂಲಕ ಎಲ್ಲಿಯವರೆಗೆ ಅನ್ಯರನ್ನು ಮಾಸ್ಟರ್ ಸರ್ವಶಕ್ತಿವಂತರನ್ನಾಗಿ ತಯಾರು ಮಾಡಿದ್ದೀರಿ ಮಾಡಲಾಗಿದೆ?

ವಿಶೇಷವಾಗಿ ಈ ಮೂರು ಮಾತುಗಳ ಪರಿಶೀಲನೆ ಮಾಡುತ್ತಿದ್ದೆವು. ಇತ್ತೀಚೆಗೆ ಪರೀಕ್ಷಾ ಪತ್ರಿಕೆಯ ಪರಿಶೀಲನೆಯಾಗುತ್ತಿದೆ ಎಂದು ತಿಳಿಸಿದೆವಲ್ಲವೆ. ಅಂದ ಮೇಲೆ ಇಂದು ಈ ಪರೀಕ್ಷಾಪತ್ರಿಕೆಯ ಪರಿಶೀಲನೆ ಆಯಿತು. ಫಲಿತಾಂಶವೇನಾಯಿತು? ಮೂರರ ಪೂರ್ಣಾಂಕಗಳಲ್ಲಿ ಫುಲ್ ಪಾಸ್, ಪಾಸ್ ಮತ್ತು ದಯೆತೋರಿಸಿ ಪಾಸ್ ಮಾಡುವವರು, ಮೂವರು ನಂಬರ್ ವಾರ್ ಇದ್ದರು. ಫುಲ್ ಪಾಸ್ ಆಗುವವರು ಅರ್ಧಕ್ಕಿಂತಲೂ ಕಡಿಮೆ. ಪಾಸ್ ಆಗುವವರು 70% ಮತ್ತು ದಯೆಯಿಂದ ಪಾಸ್ ಮಾಡುವವರ ಪಟ್ಟಿಯು ಉದ್ದವಾಗಿತ್ತು. ಈಗ ಮುಂದೇನು ಮಾಡಬೇಕಾಗಿದೆ? ಇದು ತಂದೆಯ ಸ್ವರೂಪದ ಫಲಿತಾಂಶವಾದೆ. ಈಗಲೂ ತಂದೆಯ ರೂಪದಲ್ಲಿ ಪರಿಶೀಲನೆ ಮಾಡುತ್ತಿದ್ದಾರೆ. ಆದರೆ ಅಂತಿಮ ಫಲಿತಾಂಶದಲ್ಲಿ ತಂದೆಯ ಜೊತೆಜೊತೆಗೆ ಧರ್ಮರಾಜನೂ ಇರುತ್ತಾರೆ. ಆ ಅಂತಿಮ ಫಲಿತಾಂಶಕ್ಕಾಗಿ, ಈಗ ಕೇವಲ ಒಂದು ಮಾರ್ಜಿನ್ ಇದೆ. ಅಂತಿಮ ಅವಕಾಶವಿದೆ. ಅದು ಯಾವುದಾಗಿದೆ?

1. ಒಂದಂತೂ ಹೃದಯದ ಅವಿನಾಶಿ ವೈರಾಗ್ಯದ ಮೂಲಕ ತಮ್ಮ ಕಳೆದುಹೋದ ಮಾತುಗಳನ್ನು, ಸಂಸ್ಕಾರವೆಂಬ ಬೀಜವನ್ನು ಸುಟ್ಟು ಬಿಡಬೇಕು. ಇದನ್ನು ಸುಡುವಂತಹ ಯಜ್ಞವನ್ನು ರಚಿಸಬೇಕು. ಇದನ್ನು ಸುಡುವುದರ ಜೊತೆಜೊತೆಗೆ, ಅಮೃತವೇಳೆಯಿಂದ ರಾತ್ರಿಯವರೆಗೆ ಈಶ್ವರೀಯ ನಿಯಮಗಳು ಮತ್ತು ಮರ್ಯಾದೆಗಳನ್ನು ಸದಾ ಪಾಲನೆ ಮಾಡುವಂತಹ ವ್ರತವನ್ನು ತೆಗೆದುಕೊಳ್ಳುವುದು. 3. ನಿರಂತರ ಮಹಾದಾನಿಯಾಗಿ, ಪುಣ್ಯಾತ್ಮನಾಗಿದ್ದು ಪ್ರಜೆಗೆ ದಾನ ಮಾಡುವುದು, ಬ್ರಾಹ್ಮಣರಿಗೆ ಸದಾ ಸಹಯೋಗವನ್ನು ಕೊಡುವ ಪುಣ್ಯ ಮಾಡಿಕೊಳ್ಳುವುದು. ಅವಿನಾಶಿ ದಾನ-ಪುಣ್ಯದ ಕಾರ್ಯವು ನಡೆಯುತ್ತಿರಲಿ. ಭಲೆ ಮನಸ್ಸಿನ ಮೂಲಕ, ಭಲೆ ವಾಣಿಯ ಮೂಲಕ ಅಥವಾ ಸಂಬಂಧ ಹಾಗೂ ಸಂಪರ್ಕದ ಮೂಲಕ ನಡೆಯುತ್ತಿರಲಿ. ಈ ರೀತಿ ಹೈಜಂಪ್ ಹಾಕುತ್ತಾ, ಡಬಲ್ ಲೈಟ್ ಆಗಿರುತ್ತಾ ಶ್ರೇಷ್ಠ ಪುರುಷಾರ್ಥದ ಮೂಲಕ ಹಾರುವ ಪಕ್ಷಿಯಾಗಿ ಫಲಿತಾಂಶದವರೆಗೆ ತಲುಪಬಹುದು. ಅಂದಮೇಲೆ ಅಂತಿಮ ಫಲಿತಾಂಶದವರೆಗೆ ಇಂತಹ ಪುರುಷಾರ್ಥವನ್ನು ಮಾಡುವ ಅವಕಾಶವಿದೆ. ತಿಳಿಯಿತೆ. ಆದ್ದರಿಂದ ಅದನ್ನು ಕೇಳಿ ತಿಳಿದುಕೊಂಡು ಅಂತಿಮ ಅವಕಾಶವನ್ನು ತೆಗೆದುಕೊಳ್ಳಲಿ ಎಂದು ಪರಿಶೀಲನೆಯಾಗುತ್ತಿದೆ.

ಬ್ರಹ್ಮಾತಂದೆಯು ಹೇಳಿದರು - "ಸಾಕಾರರೂಪದ ಮೂಲಕ ಪಾಲನೆಯಾಯಿತು, ಅವ್ಯಕ್ತ ರೂಪದ ಮೂಲಕ ಪಾಲನೆಯಾಗುತ್ತಿದೆ. ಈಗ ಹೇಗೆ ಸಾಕಾರ ಪಾಲನೆಯನ್ನು ತೆಗೆದುಕೊಂಡಿರುವವರಿಗೆ ಸಮಯ- ಪ್ರತಿಸಮಯದಲ್ಲಿ ಬಹಳಷ್ಟು ಅವಕಾಶಗಳು ಸಿಕ್ಕಿದೆ. ಈಗ ಅವ್ಯಕ್ತ ಪಾಲನೆಯಿರುವವರಿಗೂ ಈ ಅಂತಿಮ ಅವಕಾಶದ ವಿಶೇಷ ಅಧಿಕಾರವು ಸಿಗಬೇಕು. ಆದ್ದರಿಂದ ಅವ್ಯಕ್ತ ಮತ್ತು ಸಾಕಾರಪಾಲನೆಯ ಪರಿಶೀಲನೆಯಲ್ಲಿ ಅಂಕಿಗಳನ್ನು ಕೊಡುವುದರಲ್ಲಿ ಸ್ವಲ್ಪ ಅಂತರವನ್ನಿಡಲಾಗಿದೆ. ಪ್ರಾರಂಭದಲ್ಲಿನ ಪರೀಕ್ಷೆ ಮತ್ತು ಅವ್ಯಕ್ತ ಪಾಲನೆಯಿರುವವರ ಪರೀಕ್ಷೆಯ ಪರಿಶೀಲನೆ ಮಾಡುವುದರಲ್ಲಿ, ಹಿಂದಿರುವವರಿಗೆ 25% ಎಕ್ಸ್ಟ್ರಾ ಅಂಕಗಳಿವೆ, ಆದ್ದರಿಂದ ಯಾರು ಬೇಕೋ ಅವರು ಅಂತಿಮ ಅವಕಾಶವನ್ನು ತೆಗೆದುಕೊಳ್ಳಬಹುದು. ಈಗ ಸೀಟುಗಳ ಸೀಟಿಯನ್ನು ಮೊಳಗಿಸಿಲ್ಲ ಆದ್ದರಿಂದ ಅವಕಾಶವನ್ನು ತೆಗೆದುಕೊಳ್ಳಿರಿ ಮತ್ತು ಸೀಟನ್ನು ತೆಗೆದುಕೊಳ್ಳಿರಿ.

ಕರ್ನಾಟಕದವರು ಸೀಟನ್ನು ತೆಗೆದುಕೊಳ್ಳುವುದರಲ್ಲಿ ಬುದ್ಧಿವಂತರಂತು ಆಗಿದ್ದಾರೆ. ಹೇಗೆ ಇಲ್ಲಿ ಸಮೀಪದ ಸೀಟನ್ನು ತೆಗೆದುಕೊಳ್ಳಲು ಬಯಸುತ್ತೀರಿ, ಹಾಗೆಯೇ ಅಂತಿಮದಲ್ಲಿಯೂ ಸಮೀಪದ ಸೀಟನ್ನು ತೆಗೆದುಕೊಂಡು ಬಿಡಬೇಕು. ಕರ್ನಾಟಕದವರು ಸಹಜವಾಗಿಯೇ ಖುಷಿ ಆಗುತ್ತೀರಲ್ಲವೆ. ಸದಾ ಜ್ಞಾನದ ರಹಸ್ಯಗಳಲ್ಲಿ ನಡೆಯುವವರಾಗಿದ್ದಾರೆ- ಬೇಸರವೂ ಆಗುವುದಿಲ್ಲ.

**ಈ ರೀತಿ ಸದಾ ರಹಸ್ಯಯುಕ್ತ, ಯೋಗಯುಕ್ತ, ಯುಕ್ತಿಯುಕ್ತ ಕರ್ಮವನ್ನು ಮಾಡುವಂತಹ, ಈ ರೀತಿ ಸದಾ ಶ್ರೇಷ್ಠವಾದ ಆತ್ಮರಿಗೆ, ಸದಾ ಸರ್ವಶಕ್ತಿವಂತ ತಂದೆಯ ಸಂಗದ ರಂಗಿನಲ್ಲಿರುವವರಿಗೆ, ಇಂತಹ ಆತ್ಮಿಕ ಆತ್ಮರಿಗೆ, ಮಹಾದಾನಿ-ಮಹಾಪುಣಾತ್ಮ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಮತ್ತು ನಮಸ್ತೆ.**

**ವಿದೇಶದ ಸೇವೆಯಲ್ಲಿ ಸಫಲತಾಮೂರ್ತಿಯಾಗುವುದಕ್ಕಾಗಿ ಬಾಪ್‌ದಾದಾರವರ ಸೂಚನೆ:-**

ವಿದೇಶದ ಸೇವೆಯಲ್ಲಿ ವಿಶೇಷವಾಗಿ ಶಾಂತಿಯ ಶಕ್ತಿಯು ಹೆಚ್ಚು ಸಫಲವಾಗುತ್ತದೆ. ಏಕೆಂದರೆ ಅಲ್ಲಿನ ಆತ್ಮರು ಒಂದು ಸೆಕೆಂಡಿನ ಶಾಂತಿಗಾಗಿಯೂ ಎಲ್ಲಾ ಜಾಗಗಳಲ್ಲಿ ಅಲೆಯುತ್ತಿದ್ದಾರೆ. ಅಂದಮೇಲೆ ಈ ರೀತಿ ಅಲೆಯುತ್ತಿರುವಂತಹ ಆತ್ಮರಿಗೆ ಒಂದಂತು- ಶಾಂತಿ ಮತ್ತು ಇನ್ನೊಂದು ಆತ್ಮಿಕಸ್ನೇಹವನ್ನು ಕೊಡಿ, ಸ್ನೇಹದಿಂದ ಶಾಂತಿಯ ಅನುಭವವನ್ನು ಮಾಡಿಸಿರಿ. ಪ್ರೇಮದ ಅಭಾವವೂ ಇದೆ ಮತ್ತು ಶಾಂತಿಯ ಅಭಾವವೂ ಇದೆ ಆದ್ದರಿಂದ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಅದರಲ್ಲಿ ಮೊದಲು- ತಂದೆಯ ಸಂಬಂಧದ ಸ್ನೇಹದ ಮಹಿಮೆಯನ್ನು ಮಾಡಿರಿ ಮತ್ತು ನಂತರದಲ್ಲಿ ಆ ಪ್ರೀತಿಯಿಂದ ಆತ್ಮರ ಸಂಬಂಧವನ್ನು ಜೋಡಣೆ ಮಾಡಿಸಿದ ನಂತರ ಶಾಂತಿಯ ಅನುಭವ ಮಾಡಿಸಿರಿ, ಭಲೆ ಡ್ರಾಮಾ ಮಾಡಿರಿ, ಭಾಷಣವನ್ನೂ ಮಾಡಿರಿ. ಆದರೆ ಭಾಷಣದಲ್ಲಿ ಪ್ರೇಮ ಸ್ವರೂಪ ಮತ್ತು ಶಾಂತಿಯ ಸ್ವರೂಪವೆರಡರ ಸಮತೋಲನವಿರಬೇಕು. ಮುಖ್ಯವಾದ ಟಾಪಿಕ್ ಇದಾಗಿರಲಿ, ಉಳಿದಂತೆ ಭಿನ್ನ-ಭಿನ್ನರೂಪಗಳಿರಲಿ, ಭಾಷಣದಿಂದಲೂ ಅದೇ ಅನುಭವ ಮಾಡಿಸಿರಿ ಮತ್ತು ಡ್ರಾಮಾದಿಂದಲೂ ಅದೇ ಅನುಭವ ಮಾಡಿಸಿ ಆಗ ವಿಭಿನ್ನ ಪ್ರಕಾರದಿಂದ ಒಂದೇ ಅನುಭವ ಮಾಡಿಸುವುದರಿಂದ ಒಳಗೆ ಮುದ್ರಣವಾಗಿ ಬಿಡುತ್ತದೆ. ಭಲೆ ಚಿಕ್ಕ-ಚಿಕ್ಕ ಕಾರ್ಯಕ್ರಮಗಳನ್ನಿಡಿ ಅಥವಾ ದೊಡ್ಡದಾಗಿರುವುದನ್ನಿಡಿ. ಆದರೆ ದೊಡ್ಡ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಮೊದಲು ಸಂಪರ್ಕವು ಸಮೀಪವಿರುವವರಿಗೆ, ವಿಭಿನ್ನ ಪ್ರಕಾರದ ಆತ್ಮರಿಗಾಗಿ ಮಾಡಬೇಕಾಗಿದೆ. ಆಗ ಏನಾಗುತ್ತದೆ? ವಿಭಿನ್ನ ಪ್ರಕಾರದ ಆತ್ಮರ ಸೇವೆಯನ್ನು ಮಾಡುವುದರಿಂದ, ಪ್ರತಿಯೊಂದು ಪ್ರಕಾರದ ಆತ್ಮರೆಲ್ಲರೂ ಸೇರುತ್ತಾರೆ. ಸಹಯೋಗಿಯಾಗಿ ಬಿಡುತ್ತಾರೆ ಮತ್ತು ಕಾರ್ಯಕ್ರಮಕ್ಕೆ ಶೋಭೆ ಉಂಟಾಗುತ್ತದೆ. ಹಾಗೆ ನೋಡಿದರೆ ವಿಭಿನ್ನತೆಯು ಪ್ರಿಯವೆನಿಸುತ್ತದೆಯಲ್ಲವೆ. ಅಂದಾಗ ವಿಭಿನ್ನ ವರ್ಗದವರ ಸಂಪರ್ಕ ಮತ್ತು ಸಂಬಂಧವನ್ನು ಮೊದಲಿನಿಂದಲೇ ಮಾಡಿಕೊಳ್ಳುವುದರಿಂದ, ಎಲ್ಲಾ ಕಾರ್ಯಗಳು ಸಫಲವಾಗಿ ಬಿಡುತ್ತದೆ. ಉಳಿದಂತೆ ವಿದೇಶದ ಸೇವೆಯ ಬಗ್ಗೆ ಯಾರು ನಿಮಿತ್ತರಾಗಿದ್ದಾರೆಯೋ, ಅವರಿಗೆ ಬಾಪ್ ದಾದಾರವರು ಸೇವೆ ಮತ್ತು ಸ್ನೇಹದ ರಿಟರ್ನ್‌ನಲ್ಲಿ ವಿಶೇಷವಾಗಿ ಪದಮಗುಣದಷ್ಟು ನೆನಪು- ಪ್ರೀತಿಯನ್ನು ಕೊಡುತ್ತಿದ್ದಾರೆ.

**2. ಜ್ಞಾನವೆಂಬ ಬೀಗದ ಕೈಯನ್ನು ಉಪಯೋಗಿಸುವುದರಿಂದ ಭಾಗ್ಯದ ಖಜಾನೆಯು ಪ್ರಾಪ್ತಿಯಾಗಲು ಸಾಧ್ಯ-**

ಈ ಸಂಗಮಯುಗದಲ್ಲಿ ಭಾಗ್ಯವನ್ನು ರೂಪಿಸಿಕೊಳ್ಳುವ ಜ್ಞಾನವೆಂಬ ಬೀಗದ ಕೈ ಸಿಗುತ್ತದೆ. ಬೀಗದ ಕೈಯನ್ನು ಹಾಕಿರಿ ಮತ್ತು ಎಷ್ಟು ಭಾಗ್ಯವನ್ನು ರೂಪಿಸಿಕೊಳ್ಳಬೇಕೋ, ಅಷ್ಟೂ ಭಾಗ್ಯದ ಖಜಾನೆಯನ್ನು ತೆಗೆದುಕೊಳ್ಳಿರಿ. ಬೀಗದ ಕೈಯನ್ನು ಉಪಯೋಗ ಮಾಡುವುದರಲ್ಲಿ ಎಲ್ಲರೂ ಬುದ್ಧಿವಂತರಲ್ಲವೆ. ಬೀಗದ ಕೈ ಸಿಕ್ಕಿತು ಮತ್ತು ಸಂಪನ್ನರಾಗಿ ಬಿಟ್ಟಿರಿ. ಎಷ್ಟು ಸಂಪನ್ನರಾಗುತ್ತಾ ಹೋಗುತ್ತೀರೋ ಅಷ್ಟು ಸ್ವತಹವಾಗಿಯೇ ಖುಷಿಯಿರುತ್ತದೆ. ಅಂದಮೇಲೆ ಎಲ್ಲರೂ ಇಂತಹ ಅನುಭವ ಮಾಡುತ್ತೀರಾ, ಹೇಗೆಂದರೆ

ಯಾವುದೇ ಜಲಪಾತದಿಂದ ನೀರು ಬರುತ್ತಿರುತ್ತದೆ, ಹಾಗೆಯೇ ಖುಷಿಯ ಜಲಪಾತವೂ ಸಹ ಸದಾ ಅಖಂಡ ಹಾಗೂ ಅವಿನಾಶಿಯಾಗಿ ಹರಿಯುತ್ತಿರುತ್ತಿರಲಿ. ಬಾಪ್‌ದಾದಾರವರೂ ಸಹ ಸದಾ ಭಾಗ್ಯದ ನಕ್ಷತ್ರವನ್ನು ನೋಡುತ್ತಾ ಹರ್ಷಿತವಾಗುತ್ತಾರೆ.

ಅವ್ಯಕ್ತ ಮುರಳಿ 30-01-1980.

***ಸ್ನೇಹ, ಸಹಯೋಗ ಮತ್ತು ಶಕ್ತಿಸ್ವರೂಪದ ಪರೀಕ್ಷಾ ಪತ್ರಿಕೆಯ ಪರಿಶೀಲನೆ ಮತ್ತು ಫಲಿತಾಂಶ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ ಶಿವ ಪರಮಾತ್ಮ ನನ್ನ ತಂದೆ

1. ನಾನು ಸ್ನೇಹಿ, ಸಹಯೋಗಿ, ಶಕ್ತಿಸ್ವರೂಪದ ಶ್ರೇಷ್ಠ ಮೂರ್ತಿ.

2. ನಾನು ತಂದೆಯೊಂದಿಗೆ ಸದಾ ಅಖಂಡವಾದ ಸ್ನೇಹದಲ್ಲಿ ಇದ್ದೇನೆ.

3. ನಾನು ಸದಾ ಸರ್ವ ಸಂಬಂಧಗಳಲ್ಲಿ ಪ್ರೀತಿಯ ರೀತಿಯನ್ನು ಪ್ರತ್ಯಕ್ಷವಾಗಿ ನಿಭಾಯಿಸಿದ್ದೇನೆ.

4. ನಾನು ಸ್ನೇಹಕ್ಕೆ ಪ್ರತ್ಯಕ್ಷ ರಿಟರ್ನ್ ಆಗಿ ಅನೇಕರನ್ನು ತಂದೆಗೆ ಸ್ನೇಹಿಯನ್ನಾಗಿ ಮಾಡಿರುವ ಸ್ನೇಹ ಮೂರ್ತಿ.

5. ನಾನು ನಿಷ್ಕಾಮ ಸಹಯೋಗಿಯಾಗಿ ಮನಸಾ, ವಾಚಾ, ಕರ್ಮಣಾ, ಸಂಬಂಧ-ಸಂಪರ್ಕದಲ್ಲಿ ಎಲ್ಲಾ ರೂಪಗಳಲ್ಲಿ ಸದಾ ಸಹಯೋಗಿಯಾಗಿ ಅನೇಕರನ್ನು ಸತ್ಯವಾದ ಸಹಯೋಗಿಗಳನ್ನಾಗಿ ಮಾಡಿದ್ದೇನೆ.

6. ನಾನು ಮಾಸ್ಟರ್ ಸರ್ವ ಶಕ್ತಿವಂತನಾಗಿ ಸಮಯಕ್ಕೆ ಶಕ್ತಿ ಮತ್ತು ಶಸ್ತ್ರಗಳ ಲಾಭವನ್ನು ಪಡೆದು, ಸ್ವಯಂನಲ್ಲಿ ಶಕ್ತಿಯ ಪ್ರಾಪ್ತಿಯಿಂದ ಅನೇಕರನ್ನು ಮಾಸ್ಟರ್ ಸರ್ವಶಕ್ತಿವಂತರನ್ನಾಗಿ ತಯಾರು ಮಾಡಿದ್ದೇನೆ.

7. ನಾನು ಹೃದಯದ ಅವಿನಾಶಿ ವೈರಾಗ್ಯದಿಂದ ಗತಿಸಿ ಹೋದ ಮಾತುಗಳನ್ನು, ಸಂಸ್ಕಾರವೆಂಬ ಬೀಜವನ್ನು ಸುಟ್ಟು ಅಮೃತ ವೇಳೆಯಿಂದ ರಾತ್ರಿಯವರೆಗೆ ಈಶ್ವರೀಯ ಮರ್ಯಾದೆ ಮತ್ತು ನಿಯಮಗಳನ್ನು ಸದಾ ಪಾಲನೆ ಮಾಡಿದ್ದೇನೆ.

8. ನಾನು ಸಂಬಂಧ ಸಂಪರ್ಕಗಳಿಂದ ಪ್ರಜೆಗಳಿಗೆ ದಾನ, ಬ್ರಾಹ್ಮಣಾತ್ಮರಿಗೆ ಸಹಯೋಗವನ್ನು ಕೊಟ್ಟಿರುವ ಪುಣ್ಯಾತ್ಮನಾಗಿದ್ದೇನೆ.

9. ನಾನು ಹೈಜಂಪ್ ಮಾಡಿ ಶ್ರೇಷ್ಠ ಪುರುಷಾರ್ಥದಿಂದ ಹಾರುವ ಪಕ್ಷಿಯಾಗಿ ಫಲಿತಾಂಶದವರೆಗೆ ತಲುಪಿದ್ದೇನೆ.